122

ಸ್ರ 1896—97ನೇ ಇಸವಿ ಅರ್ಜೀ ನಂಬರ್ 44.

ಮೃತಪಟ್ಟ ಗೌರೀ ವೆಂಕಟಸುಬ್ಬಯ್ಯನವರ ಆಸ್ತೀ ವಿಷಯದಲ್ಲಿ—

ಅರ್ಜೀದಾರು, ರಾಮುಂಣನವರು, ಮೃತಪಟ್ಟ ಸದರೀ ಗೌರೀವೆಂಕಟಸುಬ್ಬಯ್ಯನವರಿಗೆ ಅಂಣನು ಆಗಬೇಕೆಂಬ ಹಕ್ಕ್ತುದಾರಿ ಮೇಲೆ ಮೈಸೂರು ಕಿಲ್ಲೇ ಸ್ಥಳದ ಸದರೀ ರಾಮುಂಣನವರು, ಸದರೀ ವಾಸಸ್ಥರಾಗಿ ಮೃತಪಟ್ಟ ಗೌರೀ ವೆಂಕಟಸುಬ್ಬಯ್ಯನವರ ಜಿಂದಗಿ ಬಗ್ಯಾಗಿ ಬರತಕ್ಕ 220 ರೂಪಾಯಿಗಳ ಸಾಲವನ್ನು ವಸೂಲ್ ಮಾಡುವದಕ್ಕೆ ಸ್ರ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರ ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ರಾಮುಂಣನವರ ಅರ್ಜಿಯನ್ನು ಸ್ರ 1896ನೇ ಇಸವಿ ಸೆಪ್ಟಂಬರ್ ತಿಂಗಳ ತಾರೀಖು 21ರಲ್ಲಾ ಕೇಳಿ ಸರ್ಟಿಫಿಕೇಟ್ ಪಡೆಯತಕ್ಕ ಬಾಧ್ಯತೆಯನ್ನ ವಿಮರ್ಶ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಗೌರೀ ವೆಂಕಟಸುಬ್ಬಯ್ಯನವರ ಆಸ್ತಿಗೆ ಹಕ್ಕ್ತುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸ್ರ 1896—97ನೇ ಇಸವಿ ಅರ್ಜೀ ನಂಬರ್ 45.

ಮೃತಪಟ್ಟ ಮಳವಳ್ಳೀ ಸ್ಥಳದ ಫಿರ್ಕಾ ಶಾನಭೋಗ ಕೃಷ್ಣಯ್ಯನವರ ಆಸ್ತೀ ವಿಷಯದಲ್ಲಿ—

ಅರ್ಜೀದಾರು ಮಲ್ಲಂಣಯ್ಯನವರು, ಮೃತಪಟ್ಟ ಸದರೀ ಕೃಷ್ಣಯ್ಯನವರಿಗೆ ದಾಯಾದಿ ಆಗಬೇಕೆಂಬ ಹಕ್ಕ್ತುದಾರಿ ಮೇಲೆ ಅರಸೀಕೆರೆ ಸ್ಥಳದ ಸದರೀ ಮಲ್ಲಂಣಯ್ಯನವರು, ಸದರೀ ವಾಸಸ್ಥರಾಗಿ ಮೃತಪಟ್ಟ ಕೃಷ್ಣಯ್ಯನವರ ಜಿಂದಗಿ ಬಗ್ಯಾಗಿ ಬರತಕ್ಕ 45 ರೂಪಾಯಿ ಸಾಲವನ್ನು ವಸೂಲ್ ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಮಲ್ಲಂಣಯ್ಯನವರ ಅರ್ಜಿಯನ್ನು ಸ್ರ 1896ನೇ ಇಸವಿ ಸೆಪ್ಟಂಬರ್ ತಿಂಗಳ ತಾರೀಖು 18ರಲ್ಲು ಕೇಳಿ ಸರ್ಟಿಫಿಕೇಟ್ ಪಡೆಯತಕ್ಕ ಬಾಧ್ಯತೆಯನ್ನ ವಿಮರ್ಶ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಕೃಷ್ಣಯ್ಯನವರ ಆಸ್ತಿಗೆ ಹಕ್ಕ್ತುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸ್ರ 1896—97ನೇ ಇಸವಿ ಅರ್ಜೀ ನಂಬರ್ 46.

ಮೃತಪಟ್ಟ ಗರ್ಗೇಶ್ವರೀ ಕೃಷ್ಣಯ್ಯಂಗಾರ್ರ ಆಸ್ತೀ ವಿಷಯದಲ್ಲಿ—

ಅರ್ಜೀದಾರು ಶಲ್ವಪುಳ್ಳಯ್ಯಂಗಾರು, ಮೃತಪಟ್ಟ ಸದರೀ ಕೃಷ್ಣಯ್ಯಂಗಾರ್ರಿಗೆ ದತ್ತು ಮಗ ಆಗಬೇಕೆಂಬ ಹಕ್ಕ್ತುದಾರಿ ಮೇಲೆ ಮೈಸೂರು ಕೃಷ್ಣರಾಜ ಮೊಹಲಾ ಸುಬ್ಬರಾಯರ ಕೆರೆ ಬಳಿ ಸ್ಥಳದ ಸದರೀ ಶಲ್ವಪುಳ್ಳಯ್ಯಂಗಾರು, ಸದರೀ ಸ್ಥಳದ ವಾಸಸ್ಥರಾಗಿ ಮೃತಪಟ್ಟ ಕೃಷ್ಣಯ್ಯಂಗಾರ್ರ ಜಿಂದಗಿ ಬಗ್ಯಾಗಿ ಬರತಕ್ಕ 200 ರೂಪಾಯಿ ಸಾಲವನ್ನು ವಸೂಲ್ಮಾಡುವದಕ್ಕೆ ಸ್ರ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಶಲ್ವಪುಳ್ಳಯ್ಯಂಗಾರ್ರ ಅರ್ಜಿಯನ್ನು ಸ್ರ 1896ನೇ ಇಸವಿ ಸೆಪ್ಟಂಬರ್ ತಿಂಗಳ ತಾರೀಖು 21ರ ರಲ್ಲು ಕೇಳಿ ಸರ್ಟಿಫಿಕೇಟ್ ಪಡೆಯತಕ್ಕ ಬಾಧ್ಯತೆಯನ್ನ ವಿಮರ್ಶ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಕೃಷ್ಣಯ್ಯಂ ಗಾರ್ರ ಆಸ್ತಿಗೆ ಹಕ್ಕ್ತುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸ್ರ 1896ನೇ ಇಸವಿ ಆಗಸ್ಟ್ತಿಂಗಳ 15ನೇ ತಾರೀಖಿನಲ್ಲಿ ಕೋರ್ಟು ಮೊಹರ್ ನಿಸಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

ಯಂ. ರಾಮಸ್ವಾಮಯ್ಯರ್,
ಡಿಸ್ಟ್ರಿಕ್ಟ್ ಜಡ್ಜ್.

ಮೈಸೂರ್ ಡಿಸ್ಟ್ರಿಕ್ಟ್ ಫಾರೆಸ್ಟ್ ಇಲಾಖಾ.

ನೋಟಿಸ್.

ತಾರೀಖು 10ನೇ ಆಗಸ್ಟ್ 1896ನೇ ಇಸವಿ.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ:—

ಮೈಸೂರು ಡಿಸ್ಟ್ರಿಕ್ಟ್ ಫ್ರೆಂಚ್‌ರಾಕ್ಸ್ ಸಬ್ ಡಿವೀಜ್.

1. ಕೃಷ್ಣರಾಜಪೇಟೆ ತಾಲ್ಲೂಕಿಗೆ ಕೇರಿದ.

(1)	ಕನ್ನಂಬಾಡಿ ಹೋಬಳಿ ಪೈಕಿ.	ಬಲ್ಲೇನಹಳ್ಳಿ ಕಾವಲ್, ಬಿಂಡಹಳ್ಳಿ ಕಾವಲ್.
(2)	ಅಕ್ಕಹೆಬ್ಬಾಳು ಹೋಬಳಿ ಪೈಕಿ.	ಆಲಂಬಾಡಿ ಕಾವಲ್, ಬೆಳ್ಳಿಬೆಟ್ಟದ ಕಾವಲ್.

2. ನಾಗಮಂಗ್ಲ ತಾಲ್ಲೂಕಿಗೆ ಕೇರಿದ.

(1)	ಕಸಬಾ ಹೋಬಳಿ ಪೈಕಿ.	ಬಸವನಕಲ್ಲೂ ಮತ್ತು ಕೊತ್ತೀಪುರದ ಕಾವಲ್.
(2)	ಹಂಪಾಪುರದ ಫಿರಕಾ.	ನಾಗನಕೆರೆ ಕಲ್ಲಗೇರೆ ಕಾವಲ್.

3. ಶ್ರೀರಂಗಪಟ್ಣದ ತಾಲ್ಲೂಕಿಗೆ ಕೇರಿದ.

(1)	ಬಳಗುಳ್ಳದ ಹೋಬಳಿ ಪೈಕಿ.	ಕಾರಗಳ್ಳಿ, ಬಸ್ತೀಪುರ ಪ್ಯಾರ್ಟಿಕೇರ್ಸ್ ಸಮೀಪಗಳಲ್ಲಿ.

(4) ಕೃಷ್ಣರಾಜಪೇಟೆ ತಾಲ್ಲೂಕಿಗೆ ಕೇರಿದ ಡಿಸ್ಟ್ರಿಕ್ಟ್ ಜಂಗಲ್‌ಗಳೂ ಮತ್ತು ಬೀಚಿಬೆಟ್ಟದ ಜಂಗಲ್ ಸಹ.

ಸ್ರ 1897ನೇ ಇಸವಿ ಜೂನ್ ಆಖೈರ್ ವರಿಗೆ ಈ ಮೇಲ್ಕಂಡವುಗಳಲ್ಲಿ ವುತ್ಪತ್ತಿ ಆಗುವ ಶೀಗೇಕಾಯಿ, ಅಳಲೇಕಾಯಿ, ದಿಂಡು ಗೋಂದು, ಹೊಂಗೇಬೀಜ, ಜೇನುಮ್ಯೋಣ, ಜೇನುತುಪ್ಪ, ಹುಣಸೇಹಂಣು ಈ ಬಾಬ್ತುಗಳ 1896ನೇ ಇಸವಿ ಸೆಪ್ಟೆಂಬರ್ ತಾರೀಖು (2)ರಲ್ಲು ಚಿನಕುರ್ಲಿ ಮುಸಾಫರ್ ಬಂಗ್ಲೆಯಲ್ಲಿ ಡಿಸ್ಟ್ರಿಕ್ಟು ಅಥವಾ ಸಬ್ ಡಿವೀಜ್ಞ ಫಾರೆಸ್ಟ್ ಆಫಿಸರವರು ಹರಾಜು ಮಾಡಿಸುತ್ತಾರೆ.

2. ದರಖಾಸ್ತಿನಲ್ಲಿ ಮಂಜೂರಾದ ಜಿನಸಿ ಮೊತ್ತವನ್ನು 1897ನೇ ಇಸವಿ ಏಪ್ರಿಲ್ ಆಖೈರ್ ವಳಗಾಗಿ ಬಗರ್ ಲಾಗವಡಿನಿಂದ ಶ್ರೀರಂಗಪಟ್ಟಣದ ಸಂದಲ್ ಕೋಠಿಗೆ ಪಾವತಿ ಮಾಡಿ ದರೋಗರಿಂದ ರಸೀತಿ ಪಡಿಯಬೇಕು.

3. ದರಖಾಸ್ತು ಮಂಜೂರಾದವಜ್ಞೆ ಜಡದರಖಾಸ್ತುದಾರನು ದರಖಾಸ್ತಿನ ಮೇರೆ ನಡಯುಕೊಳ್ಳತಕ್ಕ ಬಗ್ಗೆ (50) ರೂಪಾಯಿಗಳು ಡಿಪಾಜಿಟ್ ಯಿಟ್ಟು ಛಾಪಾಕಾಗದ್ದಲ್ಲಿ ಮುಚ್ಚಳಿಕೆ ಬರದುಕೊಡಬೇಕಲ್ಲದೆ ಮತ್ತು ಖಾತರ್ ಜಾಮೀನ್ ಸಹ ಕೊಡಬೇಕು.

4. ಮೇಲ್ಕಂಡ ಡಿಪಾಜಿಟ್ ಮೊಬಲಗು ಕೂಡಲೆ ಪಾವತಿ ಮಾಡದೆ ಇದ್ದರೆ ಪುನಹ ಹರಾಜು ಕ್ರಮ ನಡಸಿ ಆದರಲ್ಲಿ ವುಂಟಾಗುವ ನಷ್ಟಕ್ಕೆ ಮೊದಲ್ ದರಖಾಸ್ತುದಾರನ್ನ ಗುರಿಪಡಿಸುತ್ತೆ. (2)ನೇ ದರಖಾಸ್ತಿನಲ್ಲಿ ಮೊದಲ್ ದರಖಾಸ್ತಿಗಿಂತಾ ಸರ್ಕಾರಕ್ಕೆ ಜಾಸ್ತಿ ವುತ್ಪತ್ತಿ ವುಂಟಾದಲ್ಲಿ ಡಿಟೋ ಜಾಸ್ತಿಗೆ ಮೊದಲು ದರಖಾಸ್ತುದಾರನಿಗೆ ಯೇನೂ ಹಕ್ಕು ಇರುವದಿಲ್ಲ.

5. ಮೇಲ್ಕಂಡ ವಾಯಿದೆಯಲ್ಲಿ ಜಿನಸಿಗಳನ್ನು ಕೋಠಿಗೆ ದರಖಾಸ್ತುದಾರನು ಪಾವತಿಮಾಡಿ ರಸೀತಿ ಹಾಜರ್ ಮಾಡದೆ ಯಿದ್ದಲ್ಲಿ ದರಖಾಸ್ತುದಾರನ ಡಿಪಾಜಿಟ್ ಮೊಬಲಗನ್ನ ಸರ್ಕಾರಕ್ಕೆ ಸುಖಸ್ತಾಗಿ ಶಿವಾಜಿಮೆಗೆ ದಾಖಲ್ಮಾಡಿಕೊಳ್ಳುವದಲ್ಲದೆ ಫಸಲನ್ನ ಅಮಾನಿಯಾ ಇತರ ವಿಧವಾಗಿ ರೂಢಿಸಿ ಅದರಲ್ಲಿ ವುಂಟಾಗುವ ನಷ್ಟಕ್ಕೆ ಮೊದಲು ದರಖಾಸ್ತುದಾರನನ್ನೂ ಮತ್ತು ಜಾಮೀರ್ದಾರನನ್ನೂ ಸಹ ಗುರಿಮಾಡಲಾಗುತ್ತೆ.

6. ದರಖಾಸ್ತು ಮಂಜೂರಿ ಯಾ ನಾ ಮಂಜೂರ್ ಮಾಡತಕ್ಕ ಹಕ್ಕು ಡಿಸ್ಟ್ರಿಕ್ಟು ಫಾರೆಸ್ಟ್ ಆಫಿಸರವರು ಯಿಟ್ಟುಕೊಂಡಿರುತ್ತಾರೆ.

ಟಿ. ಅಬ್ದುಲ್‌ಕರೀಮ್,
ಡಿಸ್ಟ್ರಿಕ್ಟು ಫಾರೆಸ್ಟ್ ಆಫಿಸರ್.

ಫ್ರೆಂಚ್‌ರಾಕ್ಸ್ ಸಬ್ ಡಿವಿಜ್ಞ.
ಸಾಗುವಳಿಗೋಸ್ಕರ ಜಮೀನ್ ಹಿಡುವಳಿ ಹರಾಜು.

ತಾರೀಖು 1ನೇ ಆಗಸ್ಟ್ 1896.

ಇಸ್ತಿಹಾರ್.

ಇದರಿಂದ ತಿಳಿಯಪಡಿಸುವದೇನಂದರೆ,—ಲ್ಯಾಂಡ್ ರೆವಿನ್ಯೂ ಕೋಡ್ ಮತ್ತು ರೂಲ್ಸ್ ಮೇರೆ ಇದರಡೀಲಿ ಕಂಡ ಜಮೀನ್ ಹಿಡುವಳಿಯು ಕೆಳಗೆ ನಮೂದಿಸಿರುವ ಕಾಲ ಮತ್ತು ಸ್ಥಳದಲ್ಲಿ ಬಹಿರಂಗವಾದ ಹರಾಜು ಮೂಲಕ ವಿಕ್ರಯಿಸಲ್ಪಡುವದು ಮತ್ತು ಸರ್ಕಾರದ ಸವಾಲಿಗೆ ಮೇಲ್ಪಟ್ಟು ಆಖೈರ್ ಜಡಸವಾಲ್ ಮಾಡತಕ್ಕವರಿಗೆ ಸ್ವತ್ತು ಕೊಡಿಸಲ್ಪಡುವದು.

2. ಹರಾಜು ಕೈದಾದಕೂಡ್ಲೆ ಜಡಸವಾಲ್‌ದಾರನು ತನ್ನ ಸವಾಲ್ ಮೊಬಲಗು ಪೈಕಿ ಕೇಕಡಾ 25 ರೂಪಾಯಿಗಳ ಪ್ರಕಾರ ಆಗುವ ಮೊಬಲಗನ್ನು ಠೇವಣಿ ಇಡಬೇಕು. ಹಾಗಿಲ್ಲವಾದರೆ ಸ್ವತ್ತು ಕೂಡ್ಲೆ ಪುನಹ ಹರಾಜು ಮಾಡಲ್ಪಡುವದು.

3. ಹರಾಜು ತಾರೀಖು ಲಾಗಾಯತು 15ನೇ ದಿನದ ಸೂರ್ಯಾಸ್ತಮಾನಕ್ಕೆ ಪೂರ್ವವೇ ಅಥವಾ ಅಂಥಾ 15ನೇ ದಿನವು ಸರ್ಕಾರೀ ರಜಾ ದಿನವಾಗಿದ್ದರೆ ಆ ತರುವಾಯ ಆಫಿಸ್ ಖುಲ್ಲಾ ಆಗುವ ಮೊದಲನೇ ದಿನ ಸೂರ್ಯಾಸ್ತಮಯಕ್ಕೆ ಪೂರ್ವವೇ ಪೂರಾ ಹರಾಜು ಮೊಬಲಗನ್ನ ಪಾವತಿ ಮಾಡಬೇಕು.

4. ಪೂರಾ ಹರಾಜು ಮೊಬಲಗನ್ನ ಮೇಲ್ಕಂಡಂತೆ ಗೊತ್ತುದ ಕಾಲದೊಳಗಾಗಿ ಪಾವತಿ ಮಾಡಲು ತಪ್ಪಿದರೆ, ಠೇವಣಿ ಮೊಬಲಗಿನಲ್ಲಿ ಹರಾಜಿನ ಖರ್ಚು ಜಾತಾ ಬಾಕಿ ಉಳಿದದ್ದನ್ನ ಸರ್ಕಾರಕ್ಕೆ ದಂಡವಾಗಿ ಶೇರಿಸಿಕೊಳ್ಳಲ್ಪಡುವದಲ್ಲದೆ, ಸ್ವತ್ತು ಪುನಹ ಹರಾಜು ಮಾಡಲ್ಪಡುವದು ಮತ್ತು ಹಣ ಕೊಡಲು ತಪ್ಪಿದಂಥಾ ಪೂರ್ವ ಹರಾಜುದಾರನು ಸದರೀ ಸ್ವತ್ತಿಗೆ ಆಗಲಿ, ಅಥವಾ ಅಂಥಾ ಸ್ವತ್ತಿನಂತರ ಎಪ್ಪು ಮೊಬಲಗಿಗೆ ಹರಾಜು ಮಾಡಲ್ಪಡುವದೋ ಅಂಥಾ ಮೊಬಲಗಿನ ಯಾವ ಭಾಗಕ್ಕಾದರೂ ಆಗಲಿ, ಎಲ್ಲಾ ಹಕ್ಕನ್ನೂ ಹೋಗಲಾಡಿಸಿಕೊಳ್ಳುವನು; ಆದರೆ, ಮೇಲ್ಕಂಡ ಷರತ್ತನ್ನ ಜಾರಿಗೆ ತರೋಣದರಿಂದ ವಿಶೇಷ ತೊಂದರೆ ಉಂಟಾಗುವದೆಂದು ತೋರಿಬರುವ ಸಂದರ್ಭದಲ್ಲಿ, ಡೆಪ್ಯೂಟಿ ಕಮ್ಮಿಷನರು ಅವಶ್ಯಕವಾದ ವಿಚಾರಿಸೋಡನೆ ಗವರ್ನ್‌ಮೆಂಟಿನವರ ಅಪ್ಪಣೆ ಪಡಿಯಬಹುದು. ನಂತರ ನಡೆದ ಹರಾಜಿನಲ್ಲಿ ಹುಟ್ಟಿದ ಮೊಬಲಗು ಹಣ ಕೊಡಲು ತಪ್ಪಿದಂಥಾ ಪೂರ್ವ ಹರಾಜುದಾರನ ಸವಾಲ್ ಮೊಬಲಗಿಗಿಂತಲೂ ಕಮ್ಮಿಯಾದಲ್ಲಿ, ಆ ಮೇಲೆ ಕಮ್ಮಿಯಾದಷ್ಟು ಮೊಬಲಗನ್ನ ಸದರೀ ಜವನಿಂದ ರೆವಿನ್ಯೂ ಕಂದಾಯದ ಬಾಕಿಯಂತೆ ವಸೂಲ್ ಮಾಡಲ್ಪಡುವದು.

5. ಹರಾಜು ಮೊಬಲಗು 50 ರೂಪಾಯಿಗಿಂತಲೂ ಕಮ್ಮಿಯಾಗದೆ ಇರುವ ಸಂದರ್ಭದಲ್ಲಿ ಹರಾಜು ಡೆಪ್ಯೂಟಿ ಕಮ್ಮಿಷನರ ಮಂಜೂರಾತಿಗೆ ಬಳಪಟ್ಟಿರುತ್ತೆ. ಹರಾಜು ಮೊಬಲಗು 50 ರೂಪಾಯಿಗಿಂತಲೂ ಕಮ್ಮಿಯಾಗಿದ್ದಪಕ್ಷದಲ್ಲಿ ಅಂಥಾ ಹರಾಜನ್ನ ಹದಿನಾರು ದಿವಸಗಳ ತರುವಾಯ ತಾಲ್ಲೂಕು ಅಮಲ್‌ದಾರ್‌ರೇ ಮಂಜೂರ್ ಮಾಡಬಹುದು.

6. ಹರಾಜಿನಲ್ಲಿ ಸವಾಲ್ ಮಾಡತಕ್ಕಂಥಾವರು ತಮ್ಮ ಸ್ವಂತಕ್ಕಾಗಿ ಸವಾಲ್ ಮಾಡುವದನ್ನೂ ಅಥವಾ ಮತ್ತೊಬ್ಬರ ಮುತಾಲೀಕರಾಗಿ ಸವಾಲ್ ಮಾಡುವದನ್ನೂ ತಿಳಿಸಬೇಕು. ಮತ್ತೊಬ್ಬರ ಸವಾಲ್ ಮಾಡುವ ಸಂದರ್ಭದಲ್ಲಿ ಯಾರಿಗೋಸ್ಕರ ತಾವು ಮುತಾಲೀಕರಾಗಿರುವದೋ ಅಂಥಾವರ ಬರಹ ಮೂಲಕವಾದ ಅಧಿಕಾರ ಪತ್ರಿಕೆಯನ್ನ ಹಾಜರ್ಮಾಡಬೇಕು. ಹಾಗಿಲ್ಲದೆ ಇದ್ದಲ್ಲಿ ಅವರ ಸವಾಲ್‌ಗಳನ್ನು ಅಂಗೀಕರಿಸುವದಿಲ್ಲ.

7. ಹರಾಜು ಪೂರಾ ಮೊಬಲಗು ಪಾವತಿಯಾಗಿ ಹರಾಜು ಕಾಯಮಾದ ನಂತರ ಜಮೀನನ್ನು ಹಿಡುವಳಿಯಲ್ಲಿ ಇಟ್ಟುಕೊಳ್ಳತಕ ಬಗ್ಗೆ ಸಾಗುವಳಿ ಚೀಟಿಯಾನೆ ಬರಹ ಮೂಲಕವಾದ ಅಪ್ಪಣೆಯನ್ನ (ಲ್ಯಾಂಡ್ ರೆವಿನ್ಯೂ ರೂಲ್ಸ್ ಆರ್ಟಿಕಿಲ್ಸ್ "ಡಿ" ಯಲ್ಲಿ ಕಂಡ 2ನೇ ನಂಬರ್ ಫಾರಂ) ಸವಾಲ್‌ದಾರನು ಅಮಲ್‌ದಾರ್‌ರಿಂದ ಹೊಂದುವನು.

8. ಮೇಲ್ಕಂಡ ಮೇರೆ ಅಮಲ್‌ದಾರ್‌ರು ಕೊಡುವ ಅಪ್ಪಣೆಯು ಲ್ಯಾಂಡ್ ರೆವಿನ್ಯೂ ಕೋಡ್ XIIIನೇ ಪ್ರಕರಣ ಪ್ರಕಾರ ಅಪ್ಪೀಲ್‌ಗಳು ಏನಾದರೂ ಆದರೆ ಅವುಗಳೆಲ್ಲಾ ವ್ಯವಸ್ಥೆಯಾಗುವ ನಿರೀಕ್ಷಣೇ ಮೇಲೆ ಷರತ್‌ಬಂದಿಯಾಗಿರುವದೆಂದು ಎಣಿಸತಕ್ಕದ್ದು.